ಕರ್ನಾಟಕ
ಸಂಪುಟ 4 । ಸಂಚಿಕೆ 2 । ಫೆಬ್ರುವರಿ 2014 । ಖಾಸಗಿ ಪ್ರಸಾರಕ್ಕಾಗಿ

# ಪರಿಸರ ವಾಹಿನಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಸಪತ್ರಿಕೆ



## ಕಾಸ್ಮೆಟಿಕ್ ವಿಷ

ಕೃತಕ
ಸೌಂದರ್ಯ
ವರ್ಧಕಗಳಿಂದ
ಹೆಚ್ಚುತ್ತಿವೆ
ಭಯಾನಕ
ರೋಗಗಳು



ಬೆಳಗಾವಿ
ಜಿಲ್ಲೆಯ
ವಿವಿಧ
ಕೈಗಾರಿಕಾ
ಘಟಕಗಳಿಗೆ
ಭೇಟಿ

## ಕ್ರೋಮಿಯಂ 6 ವಿಷದ

ದುರಂತ
ಕಥೆಗಳು





# ಯಲ್ಲಾಪುರ ತಾಲೂಕಿನ ಬಿಸಗೋಡಿಗೆ ಡಾ॥ವಾಮನ್ ಆಚಾರ್ಯ ಭೇಟಿ

ಇತ್ತೀಚಿಗಷ್ಟೇ ಉತ್ತರಕನ್ನಡ ಜಿಲ್ಲೆಯ, ಯಲ್ಲಾಪುರ ತಾಲೂಕಿನ ಬಿಸಗೋಡಿಗೆ ಕರಾಮಾನಿ ಮಂಡಳಿಯ ಅಧ್ಯಕ್ಷರಾದ ಡಾ॥ ವಾಮನ್‌ಆಚಾರ್ಯ ಅವರು ಭೇಟಿನೀಡಿದರು. ಇದೇ ಜನವರಿ 27 ರಂದು 'ಗಣಿ ಪ್ರದೇಶದ ಪುನಶ್ಚೇತನ ಹಾಗೂ ಬಿಸಗೋಡ ಪರಿಸರ ಪರಿಸ್ಥಿತಿ' ಕುರಿತು ಆಯೋಜಿಸಲಾಗಿದ್ದ ಅಧ್ಯಯನ ಶಿಬಿರವೊಂದರಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

**ಶಿಬಿರದ ಉದ್ದೇಶ:** ಬಿಸಗೋಡ ಕಾಳೀ ಕಣಿವೆಯಲ್ಲಿ 20 ವರ್ಷಗಳ ಹಿಂದೆ ಭಾರೀ ಗಣಿಗಾರಿಕೆ ನಡೆದಾಗ ಅದಕ್ಕೆ ಅಲ್ಲಿನ ಜನ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ವ್ಯಾಪಕ ಅರಣ್ಯನಾಶ, ರೈತರ ಕೃಷಿಭೂಮಿ ನಾಶ, ಭೂ ಕುಸಿತ ಮುಂತಾದ ಅವಘಡಗಳು ಗಣಿಗಾರಿಕೆಯಿಂದ ಸಂಭವಿಸಿದ್ದವು. 1195 ರಲ್ಲಿ ಗಣಿಪ್ರದೇಶದ ಪರಿಸರ ಪರಿಸ್ಥಿತಿ ಕುರಿತ ಅಧ್ಯಯನ ನಡೆಸಲಾಗಿತ್ತು. ಗಣಿಗಾರಿಕೆ ನಿಂತ ಮೇಲೆ ಈ ಪ್ರದೇಶದಲ್ಲಿ ಆಗಿರುವ ವನೀಕರಣ, ಅರಣ್ಯ ಪುನರುತ್ಪತ್ತಿ, ಬದಲಾವಣೆ ಇವುಗಳ ಬಗ್ಗೆ ತಜ್ಞರು ಭೇಟಿ ಕೊಡಬೇಕು. ಈ ಕುರಿತು ಸ್ಥಾನಿಕ ಜನತೆ ಹಾಗೂ ತಜ್ಞರು, ಅರಣ್ಯ ಇಲಾಖೆ ಅಧಿಕಾರಿಗಳೂ ಸೇರಿ ಸಮಾಲೋಚನೆ ನಡೆಸಬೇಕು. ಈ ಅಭಿವೃದ್ಧಿ ವಿಷಯಗಳ ಕುರಿತು ಸಮಾಲೋಚನೆ ನಡೆಸುವುದು ಶಿಬಿರದ ಆಯೋಜನೆಯ ಹಿಂದಿನ ಉದ್ದೇಶವಾಗಿತ್ತು.

